ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 57-62.**
**©*IIMRD*, Mysuru**
IIMRD JOURNALS

**www.iimrd.com**

# ಜನಪದರು ಕಂಡಂತೆ ಗಾಂಧೀಜಿ

**ಡಾ. ಜೀವನಸಾಬ್ ವಾಲಿಕಾರ್***

*ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ಕೇಂದ್ರ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಕುಷ್ಟಗಿ.

***ಸಾರಾಂಶ: (Abstract)***

ಸತ್ಯ, ಅಹಿಂಸೆ, ಸತ್ಯಾಗ್ರಹಗಳೆಂಬ ಹೋರಾಟದ ಅಸ್ತ್ರಗಳ ಮೂಲಕ ಬ್ರಿಟಿಷರಿಂದ ಭಾರತವನ್ನ ದಾಸ್ಯ ಮುಕ್ತಿಗೊಳಿಸಿದ ನೇತಾರ, ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಬಗ್ಗೆ ವಿಶ್ವವೇ ಅಭಿಮಾನಿಸಿ, ಆರಾಧಿಸುವ ಸಂದರ್ಭದಲ್ಲಿ ಬಾಪೂಜಿಯವರ ಹೋರಾಟ, ತಾತ್ವಿಕ ಚಿಂತನೆಗಳು, ತತ್ವ ಆದರ್ಶಗಳು ಜನ ಸಾಮಾನ್ಯರ ಮೇಲೆ ಪ್ರಭಾವ ಬೀರಿದ ಪರಿಣಾಮವಾಗಿ ಗ್ರಾಮೀಣ ಭಾಗದ ಜನ ಸಮುದಾಯವು ತಮ್ಮದೇ ಹಾಡು, ಕಥೆ, ಒಗಟು, ಒಡಪು ಗಾದೆ, ಗೀಗೀ ಲಾವಣಿಗಳ ಮೂಲಕ ಹಾಡಿ ಹೊಗಳಿ ಅಭಿಮಾನಿಸಿದ್ದಾರೆ. ಅವರ ಹೋರಾಟದ ಆದರ್ಶಗಳನ್ನು ಸ್ಮರಿಸಿ, ಶ್ಲಾಘಿಸಿ ನಮಿಸಿದ್ದಾರೆ.

***ಮುಖ್ಯಪದಗಳು: (Keywords)*** ಮಹಾತ್ಮ ಗಾಂಧೀಜಿ, ಸತ್ಯ, ಅಹಿಂಸೆ, ಹೋರಾಟ, ಜನಪದ ಸಾಹಿತ್ಯ.

**ಪೀಠಿಕೆ**

ಜನಪದ ಸಾಹಿತ್ಯದ ಮೂಲಕ ಹಾಡು ಕಟ್ಟಿಹಾಡಿ ಜನ ಸಾಮಾನ್ಯರಲ್ಲೂ ಜಾಗೃತಿ ಮೂಡಿಸಿ ಭಾರತ ಸ್ವಾತಂತ್ರ್ಯ ಚಳುವಳಿಯನ್ನು ಹುರಿದುಂಬಿಸಿದ್ದಾರೆ.

***ಮೊದಲಿಗೆ ಅಲ್ಲಂ ಪ್ರಭುವಿಗೆ ಶರಣಯ್ಯ***

***ಇಲ್ಲಿ ಕೂಡಿ ಕುಂತ ಮಂದಿಗೆಲ್ಲ ನನ್ನ ನಮನ***

***ಸತ್ಯದಿಂದ ಹೋರಾಡಿ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿಗೆ ನಮ ನಮನ***

ಬಾಪೂಜಿಯವರ ಹೋರಾಟ, ಅವರ ತಾತ್ವಿಕ ನಿಲುವುಗಳು, ಮಾನವ ಪರವಾದ ಚಿಂತನೆ. ಸತ್ಯ, ಶಾಂತಿ, ಅಹಿಂಸೆ ಮಾರ್ಗ. ಸತ್ಯಾಗ್ರಹ ಎಂಬ ಅಸ್ತ್ರಗಳ ಬಗ್ಗೆ ಇಡೀ ವಿಶ್ವವೇ ಆರಾಧಿಸುತ್ತಿರುವ ಸಂದರ್ಭದಲ್ಲಿ ಅಕ್ಷರ ಭಾರದಿರುವ, ಅಪಾರ ವಿವೇಕ ಹೊಂದಿರುವ ನಮ್ಮ ಜನಪದರು ಗಾಂಧಿ ತತ್ವಗಳಿಗೆ ಮಾರುಹೋಗಿ ಮನಸೋತು ಅವುಗಳನ್ನು ಅನುಸರಿಸಿ, ಸತ್ಯ ಅಹಿಂಸೆಗಳನ್ನು ತಮ್ಮ ಜೀವನದಲ್ಲಿ ಮೇಳೈಸಿಕೊಂಡು ಅನುಷ್ಠಾನಗೊಳಿಸಲು ಶತ ಪ್ರಯತ್ನಗೈದವರು. ಕರುನಾಡಿನ ಜನಪದರು ವಚನ ಚಳುವಳಿಯ ಗುರು ಅಲ್ಲಮನಿಗೆ ಶರಣೆಂಬಂತೆ ಸ್ವತಂತ್ರ ಹೋರಾಟದ ಬೆಳ್ಳಿ ಚುಕ್ಕಿ, ಸ್ವಾತಂತ್ರ್ಯ ಸೂರ್ಯ

*Please cite this article as: ಡಾ. ಜೀವನಸಾಬ ವಾಲಿಕಾರ್.* (2023). ಜನಪದರು ಕಂಡಂತೆ ಗಾಂಧೀಜಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 57–62.*

ಗಾಂಧೀಜಿಗೂ ಸಲಾಂ ಮಾಡಿದ್ದಾರೆ. ಸಾಂದರ್ಭಿಕವಾಗಿ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಮೆಚ್ಚಿ ಜನ ಸಾಮಾನ್ಯರಲ್ಲೂ ಜಾಗೃತಿ ಮೂಡಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ.

ಜನಪದ ಸಾಹಿತ್ಯವು ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ರಂಗದ ತಾಯಿ ಬೇರು. ಬಿಎಂಶ್ರೀ ಅವರು ಅಭಿವ್ಯಕ್ತಿಸಿದಂತೆ ಜನವಾಣಿ ಬೇರು ಕವಿ ವಾಣಿ ಹೂವು ಎನ್ನುವ ನೆಲೆಗಟ್ಟಿನಲ್ಲಿ ಶಿಷ್ಟ ಸಾಹಿತ್ಯದ ಮೂಲ ಬೇರು ಅದು ಜನಪದವೇ ಎಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ, ಸಮಷ್ಟಿ ಪ್ರಜ್ಞೆಯಿಂದ ಒಡಮೊಡಿದ ಈ ಸಾಹಿತ್ಯದ ಪ್ರವರ್ತಕರಾದ ಜನಪದರು ಮೌಖಿಕ ಪರಂಪರೆಯ ಭಾಗವಾಗಿ ತಲಮಾರಿನಿಂದ ತಲಮಾರಿಗೆ ಜನಪದ ಸಾಹಿತ್ಯವನ್ನು ಹರಡಿ ಹಂಚಿ ಬೆಳೆಸಿದವರು, ಸುಖಿ ಸಮಾಜ, ಆದರ್ಶ ಸಮಾಜದ ಕನಸು ಕಾಣುತ್ತಾ ಬದುಕಿದ ಜಾನಪದರ ಮೇಲೆ ಗಾಂಧೀಜಿಯವರ ಆದರ್ಶಗಳು ಅಪಾರ ಪ್ರಭಾವ ಬೀರಿವೆ ಎನ್ನುವುದಕ್ಕೆ ಈ ಕೆಳಗಿನ ಸಾಲುಗಳೇ ಸಾಕ್ಷಿಯಾಗಿವೆ.

***ಬುದ್ಧಿವಂತ ಯುವಕರೇ ಕೈಮುಗುದು ಹೇಳ್ತೀನಿ***
***ಪಟ್ಟಣದಲ್ಲಿ ಕೆಲಸಕ್ಕಾಗಿ ಅಲಿಯಬೇಡಿರಿ***
***ಹಳ್ಳಿಯಲ್ಲಿ ಇದ್ದುಕೊಂಡು ಅಭಿವೃದ್ಧಿ ಮಾಡಿಕೊಂಡು***
***ಗಾಂಧಿ ಕಂಡ ಕನಸ ನೀವು ನನಸ ಮಾಡಿರೋ.***

ಹಳ್ಳಿಗಳ ಉದ್ದಾರ, ದೇಶದ ಪ್ರಗತಿಯು ಹೌದು, ಗಾಂಧೀಜಿಯವರ ರಾಮ ರಾಜ್ಯದ, ಗ್ರಾಮ ಸ್ವರಾಜ್ಯದ ಕನಸು ದೇಶವಾಸಿಗಳ ಎದೆಯಲ್ಲಿ ಬಿತ್ತಿದ ಅವರ ಚಿಂತನೆಯ ಎಳೆಗಳು ಜನರನ್ನು ತಲುಪಿದ್ದು, ಜನಪದರು ಕಟ್ಟಿ ಹಾಡಿದ್ದ ಇಂತಹ ಹಲವಾರು ಗೀಗಿ ಪದಗಳ ಮೂಲಕ ಎಂಬುದು ಇಲ್ಲಿ ಗಮನಾರ್ಹ.

***ಹಲಿಗೆ ಹಿಡಿದಿಲ್ಲ ಬಳಪದಿ ಬರೆದಿಲ್ಲ***
***ಶ್ರೀ ಗುರು ನಮಗೆ ಬರೆಸಿಲ್ಲ ಕೇಳ್ರವ್ವ***
***ಲೆಕ್ಕಣಿಕಿ ನಮಗೆ ಗೊತ್ತಿಲ್ಲ***

ಎನ್ನುತ್ತಲೇ ಸಾವಿರಾರು ಪದ ಕಟ್ಟಿ ಹಾಡಿದ ನಮ್ಮ ಜನಪದರು ಗಾಂಧಿ ಕುರಿತು ನೂರಾರು ಲಾವಣಿ, ಜನಪದ, ಬಿಸೋಕಲ್ಲಿನ ಹಾಡು ಗಾಂಧೀಯನ್ನು ಜನಮಾನಸರನ್ನಾಗಿಸಿದವು. ದೇಶಿಯ ಮಂತ್ರವನ್ನ ಪಠಿಸಿ ಸ್ವದೇಶಿ ಚಳುವಳಿಯ ರುವಾರಿಯಾದ ಗಾಂಧಿ ಕುರಿತು ಬೀಸೋ ಕಲ್ಲಿನ ಹಾಡು ಹಾಡುವ ಗರತಿ, ಮದುವೆ ಮನೆಯಲ್ಲಿ ಒಗ್ಗಟ್ಟು ಎಷ್ಟು ಮುಖ್ಯವೋ, ದೇಶ ಸ್ವಾತಂತ್ರ್ಯಗೊಳ್ಳಲು ಸಾಂಗೀಕ ಪ್ರಯತ್ನ ಅಷ್ಟೇ ಮುಖ್ಯ ಎನ್ನುವುದನ್ನು ಸಾರಿ ಹೇಳುವ ಈ ಸಂದರ್ಭವು ಈ ಹಾಡುಗಳಲ್ಲಿ ಅಭಿವ್ಯಕ್ತವಾಗಿದೆ.

***ಅಕ್ಕಿಯ ತೊಳಿಸುವುದಕ ಒಕ್ಕಟ್ಟು ಇರಬೇಕು***
***ಪಕ್ಕ ಸ್ವವರಾಜ್ಯ ಗೆದಿಯಾಕ***
***ಆಂಗ್ಲರಿಗೆ ಬಿಕ್ಕಿ ಬೇಡಿದರ ಕೊಡರೇನ***
***ಬೀಸುವ ಕಲ್ಲಾಗ ಕೂಸು ನೂಲುವ ರಾಟಿ***
***ಈಶ ನೀನೆಂದು ಬರೆಯಿರಿ ಗಾಂಧಿಯ ಬಿಸಿ ನೆನೆಯಿರಿ ಹಾಡ್ಯಾಡಿ***

ಬ್ರಿಟಿಷರು ಇಲ್ಲಿಯ ಸಂಪತ್ತನ್ನು ದೋಚಿ ಭಾರತವನ್ನು ಬರುಡನ್ನಾಗಿಸುವ ಸಂದಿಗ್ದದ ಸ್ಥಿತಿಯಲ್ಲಿ, ನಾವೆಲ್ಲರೂ ಗಾಂಧೀಜಿಯ ಸ್ವದೇಶಿ ಚಳುವಳಿಗೆ ಸಾತ್ ನೀಡೋಣ, ದೇಶಿಯ ಉತ್ಪನ್ನಗಳನ್ನು ಬಳಸಿ ದೇಶವನ್ನ ಬಲಿಷ್ಠ ಗೊಳಿಸೋಣ, ಕೈಯಿಂದ ನೂಲಿದ ಬಟ್ಟೆ ಧರಿಸಿ ಬ್ರಿಟಿಷ್ ವಸ್ತ್ರಗಳನ್ನು ವಿರೋಧಿಸೋಣ ಎನ್ನುವ ಸಂದೇಶವನ್ನು ಗರತಿಯು ಬೀಸುವ ಕಲ್ಲಿನ ಹಾಡಿನ ಮೂಲಕ ಹೇಳುವುದನ್ನು ಇಲ್ಲಿ ನೆನೆಯಬಹುದು.

ಕಲ್ಲು ಪೂಜೆ ಮಾಡಿ ಇಲ್ಲಿ ಬೀಸುವರೆಲ್ಲ ಎಲ್ಲಾ ಗೋಧಿಯ ಗಿರಣಿಯಾಗ ಬೀಸಿದರೆ ಎಲ್ಲಿಂದ ಬರಬೇಕು ಸ್ವರಾಜ್ಯ ಎಂದು ಕೇಳಿದ ಗರತಿಯೂ ಗಾಂಧೀಜಿಯವರ ಸ್ವದೇಶಿ ಚಳುವಳಿಯ ಹೋರಾಟಕ್ಕೆ ಕೈಜೋಡಿಸಿದ, ಕೈಯಿಂದ ನೂಲಿದ ಬಟ್ಟೆಗಳನ್ನು ಧರಿಸಿ, ಬ್ರಿಟಿಷರ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ ಸ್ವದೇಶಿ ಚಳುವಳಿಗೆ ಇಂಬು ನೀಡಿದ್ದಾರೆ.

**ಖಾದಿಯ ಉಡವೆಂದಾ ಖಾದಿಯ ತೊಡುವೆಂದಾ**

**ಕಾಯ್ದಿಗೆ ಸರಿಯಾಗಿ ನಡಿ ಅಂದ**

**ಮಹಾತ್ಮ ಚಳುವಳಿ ದೇವರು ನನಗಾಂಧಿ**

ಜನಪದರ ಕಣ್ಣಲ್ಲಿ ಗಾಂಧಿ ಸ್ವಾತಂತ್ರ್ಯ ಸೂರ್ಯನಾಗಿ, ದೈವನಾಗಿ, ದೇವರಾಗಿ ಕಂಡಿದ್ದಾನೆ. ಆ ಕಾರಣಕ್ಕಾಗಿ ಜನಪದರು ಬಾಪೂಜಿಯನ್ನು ಆತ ಬರೀ ವ್ಯಕ್ತಿಯಲ್ಲ ಶಕ್ತಿ. ಸ್ವಾತಂತ್ರ್ಯ ಹೋರಾಟದ ನೇತಾರನ್ನಾಗಿ ಕಂಡಿದ್ದಾರೆ. ಕಲ್ಲು ಕೊಟ್ಟವಳಿಗೆ ಎಲ್ಲಾ ಭಾಗ್ಯವರಲ್ಲಿ ಪಲ್ಲಕ್ಕಿ ಮೇಲೆ ಮಗ ಬರಲಿ ಆ ಮನೆಗೆ ಮಲ್ಲಿಗೆ ಮೂಡಿವ ಸೊಸೆ ಬರಲಿ ಎಂದು ಹಾರೈಸಿ ಹಾಡಿದ ಪರಂಪರೆಗೆ ಸಾಕ್ಷಿಯಾದವರು ನಮ್ಮ ಜನಪದರು. ಸಮುದಾಯಿಕ ಒಳಿತನ್ನು ಬಯಸಿ ರವರು ಮತ್ತೊಬ್ಬರ ಒಳಿತಿನಲ್ಲಿ ಸಂತಸ ಪಟ್ಟವರು ಸರಳವಾಗಿ ಬದುಕಿ ಸುಖಿಗಳಾಗಿ ಬಾಳಿದವರು, ಶಾಂತಿ, ಸಾಮರಸ್ಯ, ಸೌಹಾರ್ದತೆ, ಐಕ್ಯತೆ, ಸೋದರತ್ವ ಭ್ರಾತೃತ್ವಕ್ಕೆ ಹೆಸರಾದವರು.

ಜನಪದರು ಗಾಂಧೀಜಿಯನ್ನು ಸತ್ಯದ ಅವತಾರವೆಂದು, ಸತ್ಯವೆಂಬ ಮೌಲ್ಯ ಗಾಂಧೀಜಿ ಮೂಲಕ ಮರು ವ್ಯಾಖ್ಯಾನಿಸಲ್ಪಟ್ಟಿತು ಎನ್ನುವುದನ್ನ ಒತ್ತಿ ಹೇಳಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟ ರಸಿಕರ ಕಂಗಳ ಸೆಳೆಯುವ ನೋಟ ಎಂದು ಹೇಳಿದ ಕುವೆಂಪುರವರ ಸಾಲುಗಳಂತೆ ಬಾಳಿದ ಜನಪದರು ಗಾಂಧಿಜಿ ಅವರ ಕುರಿತು ಈ ಕೆಳಕಂಡಂತೆ ನುಡಿದಿದ್ದಾರೆ.

***ಬಾರಯ್ಯ ಬಾರಯ್ಯ ಭಾರತ ಪುತ್ರ***

***ಏನು ಹೇಳಲಿ ನಿನ್ನ ಕಾರ್ಯ ವಿಚಿತ್ರ***

***ಹಿಡಿದು ಬಂದೆಪ್ಪ ಶಾಂತಿಯ ಸೂತ್ರ***

***ಅದರಿಂದ ಪಡೆದಪ್ಪ ಸರ್ವ ಸ್ವತಂತ್ರ.***

ಗರತಿ ತನ್ನ ಮಗುವನ್ನು ರಮಿಸುವ, ಊಟ ಮಾಡಿಸುವ ಸಂದರ್ಭದಲ್ಲಿ ಜೋಗುಳ ಹಾಡುತ್ತಾ ಬಾಪುವನ್ನು ಹಾಡಿ ಹೊಗಳುತ್ತಾ ನನ್ನ ಮಗು ಕೂಡ ಗಾಂಧಿತರ ಬದುಕಿ ಬಾಳಲಿ ಭಾರತ ಮಾತೆ ಹೆಮ್ಮೆ

ಪುತ್ರನಾಗಲಿ ಎನ್ನುವ ಹಾರೈಕೆಯ ಮಾತುಗಳ ಜೊತೆಗೇನೆ ಶಾಂತಿಯ ಸಂದೇಶದ ಮೂಲಕ ಸ್ವಾತಂತ್ರ್ಯ ಗಳಿಸಿಕೊಟ್ಟ ಗಾಂಧೀಜಿಯ ಗುಣಗಾನವನ್ನು ಮಾಡಿದ್ದಾಳೆ. ಶಾಂತಿಯ ದೂತ ಗಾಂಧಿ ಕುರಿತಾದ ಜನಪದ ಪರಿಕಲ್ಪನೆ ಅನನ್ಯವಾದುದು. ಶಾಂತಿ ಸೌಹಾರ್ದತೆಗೆ ಸಂಬಂಧಿಸಿದಂತೆ ಗಾಂಧಿಯ ಚಿಂತನೆಯನ್ನು ಸ್ಮರಿಸಿ ಶ್ಲಾಘಿಸಿದವರು ನಮ್ಮ ಜನಪದರು.

***ಭಾರತ ದೇಶದ ವೀರ ರೇಳಿ***

***ಗಾಂಧಿ ಮಹಾತ್ಮರ ಜಪ ಹೇಳಿ***

***ಬೆಳಗಾಯಿತು ವೀರ ರೇಳಿ***

***ಶಾಂತಿ ಸಮರದ ಕರೆ ಕೇಳಿ***

***ಎಂದು ಪದ ಕಟ್ಟಿ ಹಾಡುತ್ತಾ ಗಾಂಧೀಜಿ ಬಗ್ಗೆ ಅಭಿಮಾನ ತಾಳಿದ್ದಾರೆ.***

***ಹಿಂದೂ ಮುಸಲ್ಮಾನ ಹಿಂದೂ ಕ್ರೈಸ್ತರು ಸಹಿತ***

***ಒಂದಾಗಿ ಪಾಸಿಯಹೂದಿಗಳೆಲ್ಲಿ***

***ಮುಂದುವರಿಯುತ್ತಿರುವಲ್ಲಿ ಸಂಧಿಯಾಗಿಹ ಗಾಂಧಿ***

***ಕಂದ ಕನ್ಯೆಯರ ಮುಖದಿ ಬೆಳಗುತಿಹ ಗಾಂಧಿ***

***ಸತ್ಯವಾಡಲು ಗಾಂಧಿ ನಿತ್ಯ ಮೆರೆಯುವ ಗಾಂಧಿ***

***ಕತ್ತಲೆಯೊಳಲಲ್ಲಿ ಕೇಳುತಿಹಗಾಂಧಿ***

ಮಾನವೀಯತೆಯ ಹರಿಕಾರನಾದ ಬಾಪೂಜಿ ದೇಶ ಕೋಮು ಜ್ವಾಲೆಯಲ್ಲಿ ದಹಿಸುವ ಸಂದರ್ಭದಲ್ಲೂ, ಈ ಭಾರತ ದೇಶದ ಎಲ್ಲಾ ನಾಗರಿಕರು ಭಾರತಾಂಬೆಯ ಒಂದೇ ತಾಯಿಯ ಮಕ್ಕಳು ನಾವೆಲ್ಲರೂ ಸಹೋದರರು ಎಂಬ ಏಕತೆಯ ಭಾವೈಕ್ಯತೆಯ ಸೌಹಾರ್ದತೆಯ ಸಂದೇಶ ಸಾರುವುದರ ಮೂಲಕ ಸರ್ವ ಜಾತಿ, ಜನಾಂಗಗಳನ್ನ ಬೆಸೆಯುವ, ಒಂದಾಗಿಸುವ ಸಂಧಿಕಾರನೆಂದು ಜನಪದ ತಾಯಿ ಕಟ್ಟಿ ಹಾಡುತ್ತಾ, ಕೋಮು ಕತ್ತಲೆಯಲ್ಲಿ ಗಾಂಧಿ ಸೌಹಾರ್ದತೆಯ ಬೆಳಕಿನ ಕಿರಣವಾಗಿ ಗೋಚರಿಸುತ್ತಾರೆ ಎಂಬ ಸಂಗತಿಯನ್ನು ಪ್ರಕಟಪಡಿಸುತ್ತಾಳೆ.

ಅಖಂಡ ಭಾರತೀಯ ಮನಸ್ಸುಗಳನ್ನ ಒಗ್ಗೂಡಿಸಿ ಸತ್ಯ, ಉಪವಾಸ ಸತ್ಯಾಗ್ರಹ ಅಹಿಂಸಾ ಮಾರ್ಗದಡಿ ಸ್ವಾತಂತ್ರ ಗಳಿಸಿ ಕೊಡುವಲ್ಲಿ, ಸ್ವಾತಂತ್ರ್ಯ ಸಂಗ್ರಾಮವನ್ನು ಜನಮುಖಿನ್ನಾಗಿಸುವಲ್ಲಿ ಗಾಂಧೀಜಿಯ ಪಾತ್ರ ಬಹುದೊಡ್ಡದು ಎನ್ನುವುದನ್ನು ಜನಪದರು ಸಾರಿ ಸಾರಿ ಹೇಳುತ್ತಾ, ಗಾಂಧೀಜಿಯ ಸ್ವಾತಂತ್ರ್ಯ ಹೋರಾಟಕ್ಕೆ ಜನರ ಕಸುವನ್ನು ಒಗ್ಗೂಡಿಸುವಲ್ಲಿ ಜನಪದರು ಹಗಲಿರುಳು ಶ್ರಮಿಸಿದರು. ಆ ಮೂಲಕ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಜನಪದವು ಸ್ವಾತಂತ್ರ್ಯ ಹೋರಾಟಗಾರರ ಬಗೆಗಿನ ಕಟ್ಟಿ ಹಾಡಿದ ಹಾಡುಗಳು ಗಾದೆಗಳು ಒಗಟುಗಳು ಒಡಪುಗಳು ಇಂದಿಗೂ ಜನಮಾನಸದಲ್ಲಿ ಉಳಿದಿರುವುದನ್ನು ಕಾಣುತ್ತೇವೆ. ಜನಪದರು ಬಹುತೇಕ ಸಂದರ್ಭದಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಮಡಿದ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ, ಜಾನ್ಸಿ ರಾಣಿ ಲಕ್ಷ್ಮೀಬಾಯಿ, ಮಂಗಲ್ ಪಾಂಡೆ ಟಿಪ್ಪು

ಸುಲ್ತಾನ್, ಮದಕರಿ ನಾಯಕ, ಹಲಗಲಿ ಬೇಡರು ಮುಂತಾದವರನ್ನು ತಮ್ಮ ಜನಪದದ ಮೂಲಕ ಸ್ಮರಿಸಿ ಹಾಡು ಕಟ್ಟಿ ಹೇಳಿದ್ದಾರೆ. ಅವರಲ್ಲಿ ಗಾಂಧೀಜಿ ಅಗ್ರಗಣ್ಯ ಎಂಬುದು ಜನಪದರ ಮೌಖಿಕ ಸಾಹಿತ್ಯದಿಂದ ತಿಳಿದುಬರುತ್ತದೆ.

*ನಾಡ ಬಂಧುವೆ ನಿನಗೆ ಸುಖವ ಬೇಡುವುದಿಲ್ಲ*

*ನಾಡಿಗೆ ನೀನೇ ದೊಡ್ಡಾತ ಗಾಂಧಿ*

*ಸಿರಿ ಮಹಾತ್ಮನೇ ಬಂಗಾರ*

ಜನಪದ ಗರತಿಯು ಗಾಂಧೀಜಿಯನ್ನು ಭಾರತದ ಬಂಗಾರ ಎಂದು ದೇಶದ ಮುತ್ತು ರತ್ನ ಎಂದು ಹಾಡಿ ಹೊಗಳಿರುವುದನ್ನು ಇಲ್ಲಿ ಸ್ಮರಿಸಬಹುದು.

ಹಸುವಿಗೆ ಅಂಬಲಿ ಮದ್ದು ಬಿಸಿಲಿಗೆ ಕೊಡೆಮದ್ದು ಕನ್ನಡದ ನೆಲಕ್ಕೆ ಬಸವಣ್ಣ ಮದ್ದು ಎನ್ನುವ ಹಾಗೆ ಇವತ್ತಿನ ಭಾರತದ ಸಂದಿಗ್ಧತೆಗೆ ಸವಾಲುಗಳಿಗೆ ಗಾಂಧೀ ಚಿಂತನೆಗಳೇ ಮದ್ದು ಎನ್ನುವುದನ್ನು ಜನಪದ ಚಿಂತನೆಗಳು ಸಾರಿ ಹೇಳುತ್ತೇವೆ.

*ಕಣ್ಣು ಮುಚ್ಚಲು ಗಾಂಧಿ ಕನಸಿನೋಳು ತಾ ಗಾಂಧಿ*

*ಮುನ್ನೆರಡೂ ಮೂರು ಮನೆ ಹಳ್ಳಿಯೊಳ್ ಗಾಂಧಿ*

*ಉನ್ನತಾದ್ರಿಯ ಶಿಖರದೊಳಗು ಪಾತಾಳದಾ*

*ಕೊನ್ನೂರ ಕಂದರದಿ ಕಾಣಿಸುವ ಗಾಂಧಿ.*

*ಬುದ್ಧಿಯಲಿ ತಾ ಗಾಂಧಿ ನಿದ್ದೆಯಲಿ ತಾ ಗಾಂಧಿ ಸಿದ್ದನಾಗಿರುವ ಪ್ರಸಿದ್ಧ ಗಾಂಧಿ*

*ಮುದ್ದು ಮೋಹನ ದಾಸ ಭದ್ರನಾಗಿಹ ಗಾಂಧಿ*

*ತಿದ್ದಿ ತೋರುವ ತಾನೇ ಶುದ್ಧ ಗಾಂಧಿ.*

*ಸುತ್ತಲಿನ ತೀರ ಪರರಾಷ್ಟ್ರ ಪಾತಾಳದಲಿ*

*ಚಿತ್ರವೆನಿಸುತಿಹ ಚಿದ್ರೂಪ ಗಾಂಧಿ*

ದೇಶ ದೇಶಗಳಲಿ ದೇವರೆನಿಸುವ ಗಾಂಧಿ

*ಕೋಶ ಕೋಶಗಳಲ್ಲಿ ಕರ್ಮ ಗಾಂಧಿ*

*ದಾಸರಿಗೆ ನಿತ್ಯದಲ್ಲಿ ಭಾಸವಾಗುವ ಗಾಂಧಿ*

*ವಾಸವಾಗಿಹ ಹೃದಯ ಪಟದಲ್ಲಿ ಗಾಂಧಿ*

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗರತಿಯರು, ಅನೇಕ ಹೋರಾಟಗಾರರು ಹಾಡಿಕೊಳ್ಳುತ್ತಾ ಸ್ವಾತಂತ್ರ್ಯ ಸಂದರ್ಭದಲ್ಲಿ ಧುಮಕಲು ಪ್ರೇರೇಪಣೆ ನೀಡಿದ ಇಂಥ ಅನೇಕ ಹಾಡುಗಳು ಇಂದಿಗೂ

ಜನಪದರ ಬಾಯಲ್ಲಿ ಆಗಾಗ ಕೇಳಿ ಬರುತ್ತಿವೆ. ಇಂದು ಗಾಂಧಿಯನ್ನು ಕೊಂದ ಗೋಡ್ಸೆನನ್ನು ಆರಾಧಿಸುವ ಪ್ರವೃತ್ತಿ ಹೆಚ್ಚುತ್ತಿರುವ ಈ ಸಂಕಷ್ಟ ಸಂದಿಗ್ಧ ಸ್ಥಿತಿಯಲ್ಲಿ. ಗಾಂಧೀಜಿಯ ನಿಜವಾದ ವ್ಯಕ್ತಿತ್ವ ಇಂದಿನ ಯುವ ಜನತೆಗೆ ಅರ್ಥವಾಗಬೇಕಾಗಿದೆ. ಗಾಂಧಿ ಕೇವಲ ಭಾರತೀಯರಿಗೆ ಪೂಜ್ಯನೀಯ ಅಷ್ಟೇ ಅಲ್ಲ, ವಿಶ್ವದ ಅನೇಕ ರಾಷ್ಟ್ರಗಳು ಗಾಂಧೀಜಿಯ ಹೋರಾಟದ ಆದರ್ಶಗಳನ್ನು ಸ್ಪೂರ್ತಿಯನ್ನಾಗಿ ಪಡೆದಿವೆ. ವಿಶ್ವದ ಅಗ್ರಗಣ್ಯ ನಾಯಕರು ಗಾಂಧೀಜಿಯ ತತ್ವ ಆದರ್ಶಗಳನ್ನ ಮೈಗೂಡಿಸಿಕೊಂಡು ಜಗತ್ತಿನ ಮಾನವ ಕುಲಕ್ಕೆ ಬೆಳಕಾಗಿದ್ದಾರೆ. ದೇಶ ದೇಶಗಳಲ್ಲಿ ದೇವರು ಎನಿಸುವ ಗಾಂಧಿ ಎನ್ನುವ ಜನಪದ ತಾಯಿಯ ಹಾಡಿನ ಈ ಸಾಲು ಗಾಂಧೀಜಿಯನ್ನು ವಿಶ್ವದ ದೇವರನ್ನಾಗಿಸಿದೆ. ದೇವರೆಂದರೆ ಎಲ್ಲರನ್ನೂ ಪ್ರೀತಿಸುವ ಎಲ್ಲರ ಒಳಿತನ್ನು ಬಯಸುವನು ದೇವರಂತ ವ್ಯಕ್ತಿತ್ವ ಮೈಗೂಡಿಸಿಕೊಂಡ ಗಾಂಧಿ, ಗ್ರಾಮೀಣ ಜನಪದರಿಗೆ ದೇವರಾಗಿ ಉಳಿದಿದ್ದಾನೆ. ಗಾಂಧಿ ಜಯಂತಿಯ ಈ ಸಂದರ್ಭದಲ್ಲಿ ಗಾಂಧಿಯ ತತ್ವ ಚಿಂತನೆಗಳು ಹೋರಾಟದ ಆದರ್ಶಗಳು, ಭಾರತಕ್ಕೆ, ವಿಶ್ವಕ್ಕೆ ಬೆಳಕಾಗಲಿ ಎಂಬ ಸದಾಶಯ ಜನಪದರದು.

**ಪರಾಮರ್ಶನ ಗ್ರಂಥಗಳು**


- ಅನುರಾಧ ಕೃಷ್ಣ ಕಟ್ಟಿ. (2017). ಹಾಡು ಕಟ್ಟಿದ ನಾಡು. ಯಜ್ಞ ಪ್ರಕಾಶನ, ಹೊಸಪೇಟೆ.
- ದೇ.ಜವರೇಗೌಡ. (1978). ಜನಪದ ಗೀತಾಜಲಿ. ಸಾಹಿತ್ಯ ಅಕಾಡೆಮಿ, ನವದೆಹಲಿ.
- ಗದ್ದಗಿಮಠ. (1960). ಕನ್ನಡ ಜನಪದ ಗೀತೆಗಳು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.